ಕಾಮ್ ನ್ಯೂಸ್

# CAM NEWS

24 ● ಜೂನ್ 2010

## ಲೇಖನ ಪರಿಷ್ಕರಣೆಯ ಕಾಳಜಿ

ಸುತ್ತಲೂ ಹಸಿರು ಹೊದ್ದ ಕಾಫಿ ಎಸ್ಟೇಟ್‌ಗಳು. ನಡುವೆ ಭತ್ತದ ಗದ್ದೆ. ಅಲ್ಲಲ್ಲಿ ಅಡಿಕೆ, ಬಾಳೆ. ಇವುಗಳ ಮಧ್ಯೆ ಕೆಂಪು ಹಂಚಿನ ಮನೆಗಳು. ತಿಂಗಳ ಹಿಂದೆ ಕಾಮ್ ದಶಮಾನೋತ್ಸವಕ್ಕೆ ಪೂರ್ವಭಾವಿಯಾಗಿ ದೇವವೃಂದಕ್ಕೆ ಹೋದಾಗ ಕಣ್ಸೆಳೆದದ್ದು ಅಲ್ಲಿನ ಪ್ರಕೃತಿ. ಮನದೊಳಗೆ ಉಳಿದದ್ದು ಊರವರ ಆತ್ಮೀಯತೆ. ಹಿರಿಯರಾದ ಡಿ.ಬಿ. ಸುಬ್ಬೇಗೌಡರು ಬೆನ್ನುತಟ್ಟಿ ಕಾರ್ಯಕ್ರಮಕ್ಕೆ ಪೂರ್ಣ ಸಹಕಾರದ ಭರವಸೆ ನೀಡಿದ್ದಾರೆ. ಹಾಗೆಯೇ ಕಾಮ್ ಬಳಗದ ಎಂ.ಜೆ. ದಿನೇಶ್, ಕೆ.ಎಸ್. ಪೂರ್ಣಿಮ –ತೀರ್ಥಮಲ್ಲೇಶ್, ಜಯರಾಮ್ ದೇವವೃಂದ ಇವರೆಲ್ಲರ ಕುಟುಂಬದವರೂ ಪ್ರಾಥಮಿಕ ಶಿಬಿರ ಹಾಗೂ 10ನೇ ವಾರ್ಷಿಕೋತ್ಸವ (ಅಕ್ಟೋಬರ್ 28–31, 2010) ಸಫಲವಾಗುವಲ್ಲಿ ಕೈಜೋಡಿಸುವ ಆಶ್ವಾಸನೆ ನೀಡಿದ್ದಾರೆ.

ಕೇಂದ್ರದ ದಶಮಾನೋತ್ಸವದ ಅಂಗವಾಗಿ ನೀಡಲು ಉದ್ದೇಶಿಸಿರುವ ವಿಶೇಷ ಪುರಸ್ಕಾರದ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದೆವು. ಅನೇಕ ಹಿತೈಷಿಗಳು ಈ ಯೋಚನೆ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ. ಸಾಗರದ ಬಂದಗದ್ದೆ ರಾಧಾಕೃಷ್ಣ ಅವರು ತಕ್ಷಣವೇ ಸಂಪರ್ಕಿಸಿ ಆ ಭಾಗದಲ್ಲಿ ಇಂತಹ ಕೆಲಸ ಮಾಡುತ್ತಿರುವವರ ವಿವರ ದೊರಕಿಸಿಕೊಡುವುದಾಗಿ ಹೇಳಿದ್ದಾರೆ. ನಿಮ್ಮ ಊರಿನಲ್ಲೂ ಎಲೆಮರೆಯಲ್ಲಿ ಕೃಷಿ ಪತ್ರಿಕೋದ್ಯಮ ವಲಯದ ಬೆಳವಣಿಗೆಗೆ ಸಹಕಾರ ನೀಡುವವರಿದ್ದರೆ ಕೇಂದ್ರಕ್ಕೆ ಮಾಹಿತಿ ನೀಡಿ.

ಏಳನೇ ವರ್ಷದ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿ ಪ್ರಾರಂಭವಾಗಿ ಆರು ತಿಂಗಳಾಯಿತು. ಹಲವರು ಲೇಖನ ಬರವಣಿಗೆಯಲ್ಲಿ ಪರಿಶ್ರಮ ತೋರುತ್ತಿದ್ದಾರೆ. ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾದ ಸುರೇಶ್ ಧಾರವಾಡಕರ್ ಅವರ ಶುಂಠಿ ಕುರಿತ ಲೇಖನಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿದೆಯಂತೆ. ಅದರ ಬೆನ್ನಲ್ಲೆ ಅವರ ಮೂರು ಲೇಖನಗಳು ಅದೇ ಪತ್ರಿಕೆಯಲ್ಲಿ ಪ್ರಕಟವಾದವು. ಪ್ರಜಾವಾಣಿಯಲ್ಲಿ ಪ್ರಕಟವಾದ ಶಶಿಧರ್ ಹೆಮ್ಮಣ್ಣ ಅವರ ಶಂಕರಪುರ ಮಲ್ಲಿಗೆ ಕುರಿತ ಲೇಖನ ಆಂಗ್ಲಭಾಷೆಗೆ ಭಾಷಾಂತರಗೊಂಡು ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟವಾಗಿದೆ. ರಮಾ ಎಸ್., ಕೆ.ವಿ. ಸರಸ್ವತಿ, ಸರವು ಸದಾನಂದ, ಗಂಗಾ ಅಂಕದ, ಸುನೀತಾ ಕುಸುಗಲ್, ಸೋ.ಸೋ. ಮೋಹನ್ ಕುಮಾರ್ ಮುಂತಾದವರ ಲೇಖನಗಳು ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ಆಶಾಲತಾ ಕುಲಕರ್ಣಿ, ಮಧುಮತಿ ಪಾಟೀಲ್ ಹಾಗೂ ನಿಂಗದಳ್ಳಿ ಮಲ್ಲಿಕಾರ್ಜುನ ಅವರು ಹೊಸ ವಿಷಯಗಳ ಬೆನ್ನತ್ತಿ ಲೇಖನ ಬರೆಯುತ್ತಿದ್ದಾರೆ. ಸುಬ್ರಾಯ ಹೆಗಡೆ, ಪ್ರಮೀಳಾ ಸಿ.ಕೆ. ಮೊದಲಾದವರು ನಿರಂತರವಾಗಿ ಕೇಂದ್ರದೊಡನೆ ಸಂಪರ್ಕದಲ್ಲಿದ್ದಾರೆ. ಒಟ್ಟಾರೆಯಾಗಿ ಈ ಬಾರಿ ಲೇಖನವನ್ನು ಪ್ರಕಟಿಸುವ ಹುಮ್ಮಸ್ಸಿಗಿಂತ ಪರಿಷ್ಕರಿಸುವ ಕಾಳಜಿ ಹೆಚ್ಚಿನ ಅಭ್ಯರ್ಥಿಗಳಲ್ಲಿ ಕಂಡುಬರುತ್ತಿದೆ. ಈ ಬಾರಿಯ ಅಭ್ಯರ್ಥಿಗಳು ಪರಸ್ಪರ ಸಂಪರ್ಕದಲ್ಲಿರುವುದು ಕೂಡ ವಿಶೇಷ. ಕೆಲವರು ಕಾಮ್ ಫೆಲೋಗಳೊಂದಿಗೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಈ ಮಧ್ಯೆ ಕೆಲವು ಅಭ್ಯರ್ಥಿಗಳು ತಿಂಗಳ ಅಸೈನ್‌ಮೆಂಟ್ ವರ್ಷಕ್ಕೊಮ್ಮೆ ಬರುವ ಪರೀಕ್ಷೆಗಿಂತಲೂ ಕಠಿಣ ಎಂಬ ಚಿಂತೆಯಲ್ಲಿದ್ದಾರೆ. ಮೂರು ಮಂದಿ ವೈಯಕ್ತಿಕ ಕಾರಣಗಳಿಂದಾಗಿ ತರಬೇತಿಯಲ್ಲಿ ಮುಂದುವರಿದಿಲ್ಲ.

ಎಂದಿನಂತೆ ಕಾಮ್ ಫೆಲೋಗಳು ಸಕ್ರಿಯರಾಗಿದ್ದಾರೆ. ಪುತ್ತೂರಿನ ಪ್ರಕಾಶ್ ಭಟ್ ಅವರು 'ಸಿಹಿ ನೀರುಳ್ಳಿ'ಯ ಕುರಿತು ಬರೆದ ಸರಣಿ ಲೇಖನಗಳಿಗೆ ಬೆಳೆಗಾರರು, ಗ್ರಾಹಕರು, ವಿಜ್ಞಾನಿಗಳು, ಸಂಶೋಧನಾ ಕೇಂದ್ರ ಹೀಗೆ ಹಲವು ಕಡೆಗಳಿಂದ ಪ್ರತಿಕ್ರಿಯೆ ಬಂದಿದೆ. ಬರವಣಿಗೆ ಎಷ್ಟು ಪರಿಣಾಮಕಾರಿ ಎಂಬುದಕ್ಕೆ ಇದು ಒಂದು ನಿದರ್ಶನ. ಹಿರಿಯ ಫೆಲೋ ಅನುಸೂಯ ಶರ್ಮ ಕಾಮ್ ಬಳಗದವರ ಲೇಖನ ಪ್ರಕಟವಾದ ತಕ್ಷಣ ಸಂಪರ್ಕಿಸಿ ಹುರಿದುಂಬಿಸುತ್ತಾರೆ. ಕೇಂದ್ರದ ಸಂಪನ್ಮೂಲ ವ್ಯಕ್ತಿ ಶ್ರೀ ಪಡ್ರೆ ಅವರ ಮಾರ್ಗದರ್ಶನದಲ್ಲಿ ಕಾಮ್ ಫೆಲೋಗಳಾದ ರೇಖಾ ಸಂಪತ್ ಹಾಗೂ ಗಣಪತಿ ಭಟ್ ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ 'ಹಲಸು ಮೇಳ'ದಲ್ಲಿ ಪ್ರಬಂಧ ಮಂಡಿಸಿ ಭೇಷ್ ಎನಿಸಿಕೊಂಡಿದ್ದಾರೆ.

ಕೃಷಿಯಲ್ಲಿ ನೆಮ್ಮದಿ ಕಂಡಿರುವ ರೈತರ ಅನುಭವಗಳನ್ನು ದಾಖಲಿಸುವ ಪುಸ್ತಕ ಸರಣಿಯ ಮುಂದಿನ ಪುಸ್ತಿಕೆ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬೆಳಕು ಕಾಣಲಿದೆ. ಬೆಳಗಾವಿ ಜಿಲ್ಲೆ, ಅಥಣಿಯ ಕೃಷಿಕ ಎಸ್.ಎಮ್. ಪಾಟೀಲ ಹಾಗೂ ಅವರ ಕುಟುಂಬದ ಕೃಷಿ ಪ್ರಯೋಗಗಳ ಕುರಿತು ಲೇಖನ ಬರೆದಿರುವ ಕಾಮ್ ಫೆಲೋ ಲೀಲಾ ಕೌಜಗೇರಿ ಈ ಪುಸ್ತಕಕ್ಕೆ ಹೂರಣ ಒದಗಿಸಿದ್ದಾರೆ.

ಅನಿತಾ ಪೈಲೂರು
ಅಧ್ಯಕ್ಷೆ, ಕೃಷಿ ಮಾಧ್ಯಮ ಕೇಂದ್ರ

## ನಿಸರ್ಗ ರಮಣೀಯ ದೇವವೃಂದ

– ಕೆ.ಎಸ್. ಪೂರ್ಣಿಮ

ದೇವಾದಿದೇವತೆಗಳ ಸಮೂಹವೇ ಇಲ್ಲಿ ನೆಲೆಸಿತ್ತು ಎಂಬ ಪ್ರತೀತಿಯೇ ದೇವವೃಂದ ಹೆಸರಿನ ಹಿನ್ನೆಲೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕಿನ ಈ ಗ್ರಾಮದ ಜನಸಂಖ್ಯೆ ಎರಡು ಸಾವಿರ. ಹಿಂದೆ ಊರು ಬಹಳ ದೊಡ್ಡದಿತ್ತಂತೆ. ಕಾಲಾನುಕ್ರಮದಲ್ಲಿ ಅಕ್ಕಸಾಲಿಗರು, ದರ್ಜಿಗಳು, ಅಗಸರು, ಕಂಚುವಾಳರು ಕಾಲದ ಹೊಡೆತಕ್ಕೆ ಸಿಲುಕಿ ಬದುಕನ್ನರಸಿ ವಲಸೆ ಹೋಗಿದ್ದಾರೆ. ಈಗಲೂ ಅವರಿದ್ದ ಸ್ಥಳಗಳಿಗೆ ಅಗಸರ ಕಾಲುವೆ, ಕಂಚಿಗರ ಉಡುಬೆ ಎಂಬಿತ್ಯಾದಿ ಹೆಸರುಗಳಿವೆ. ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ದೇವವೃಂದಕ್ಕೆ ಜಪಾವತಿ ಜೀವನದಿ. ವ್ಯವಸಾಯವೇ ಪ್ರಧಾನ. ಕಾಫಿ, ಭತ್ತ, ಅಡಿಕೆ, ಶುಂಠಿ ಮುಖ್ಯ ಬೆಳೆಗಳು. ವಾರ್ಷಿಕ ಸರಾಸರಿ ಮಳೆ 150ರಿಂದ 200 ಇಂಚು. ಅಕ್ಕಿ ರೊಟ್ಟಿ ಹಾಗೂ ಋತುಮಾನಕ್ಕನುಗುಣವಾಗಿ ಸಿಗುವ ಕೆಸವು, ಕಳಲೆ ಇತ್ಯಾದಿ ನೆಚ್ಚಿನ ಉಪಾಹಾರ. ಉತ್ಸಾಹಿ ಊರವರಿಂದ ಸದಾ ಒಂದಿಲ್ಲೊಂದು ಸಮಾಜಮುಖಿ ಚಟುವಟಿಕೆ. ನಿಸರ್ಗ ರಮಣೀಯ ದೇವವೃಂದ ಹಾಗೂ ಸುತ್ತಮುತ್ತ ಹೋಮ್ ಸ್ಟೇ ಸೌಲಭ್ಯ ಇತ್ತೀಚಿನ ಬೆಳವಣಿಗೆ.



ಇಲ್ಲಿನ ರಾಮೇಶ್ವರ ದೇವಸ್ಥಾನ ಎರಡು ಸಾವಿರ ವರ್ಷಗಳ ಹಿಂದೆ ಕನ್ನಡ ನಾಡಿನ ಮೊದಲ ರಾಜವಂಶ ಕದಂಬರಿಂದ ನಿರ್ಮಿತವಾದುದು. ಪ್ರತಿವರ್ಷ ಯುಗಾದಿಯಂದು ವಿಜೃಂಭಣೆಯ ಜಾತ್ರೆ. ಅದಕ್ಕೆ ಮಲೆನಾಡಿನ ಮೂಲೆ ಮೂಲೆಗಳಿಂದ ಹರಿದುಬರುವ ಜನಸಾಗರ. ಶಿವರಾತ್ರಿಯಂದು ಕೂಡ ಇಲ್ಲಿ ವಿಶೇಷ ಸಂಭ್ರಮ. ಹೊಯ್ಸಳ ಸಾಮ್ರಾಜ್ಯದ ಮೂಲ ಪುರುಷ ಸಳ ಹುಲಿಯನ್ನು ವಧಿಸಿದ 'ಅಂಗಡಿ'ಗೆ ದೇವವೃಂದದಿಂದ ಐದು ಕಿ.ಮೀ. ಇದೀಗ ದೇವವೃಂದ ಕೃಷಿ ಮಾಧ್ಯಮ ಕೇಂದ್ರದ ದಶಮಾನೋತ್ಸವಕ್ಕೆ ಅಣಿಯಾಗುತ್ತಿದೆ. ಊರ ಜನತೆಗೆ ಇದು ಅಭಿಮಾನದ ಸಂಗತಿ.

(ದೇವವೃಂದ ಸಂಪರ್ಕ: ಎಂ.ಜೆ. ದಿನೇಶ್: 08263–239090; 9242253960; ಜಯರಾಮ ದೇವವೃಂದ: 9448918687; ಕೆ.ಎಸ್. ಪೂರ್ಣಿಮ: 08177 –290000)

- ಕೃಷಿ ಮಾಧ್ಯಮ ಕೇಂದ್ರದ ನೂತನ ಜಾಲತಾಣ www.krushimadhyama.org ಸಿದ್ಧವಾಗಿದೆ. ಕೇಂದ್ರದ ಹಿತೈಷಿ ಚೆಲುವರಾಜ್ ಈ ಜಾಲತಾಣವನ್ನು ರೂಪಿಸಿದ್ದಾರೆ. ಅವರಿಗೆ ಹಾಗೂ ಜಾಲತಾಣವನ್ನು ಸಿದ್ಧಪಡಿಸುವಲ್ಲಿ ನಮಗೆ ಸಹಕರಿಸಿದ ಇನ್ನೊಬ್ಬ ಹಿತೈಷಿ ವಸಂತ ಕಜೆ ಅವರಿಗೆ ಕೇಂದ್ರ ಆಭಾರಿ. ಜಾಲತಾಣದಲ್ಲಿ ಕನ್ನಡ ಮತ್ತು ಇಂಗ್ಲಿಷ್ ವಿಭಾಗಗಳಿದ್ದು, ಸದ್ಯ ಕನ್ನಡ ವಿಭಾಗದಲ್ಲಿ ಪ್ರಾಥಮಿಕ ಮಾಹಿತಿಗಳನ್ನಷ್ಟೆ ನೀಡಲಾಗಿದೆ. ಇಂಗ್ಲಿಷ್ ವಿಭಾಗ ಮುಂಬರುವ ದಿನಗಳಲ್ಲಿ ಅನಾವರಣಗೊಳ್ಳಲಿದೆ.
- ಬೆಂಗಳೂರಿನಲ್ಲಿ ನಡೆದ ಕಾಮ್ ವಾರ್ಷಿಕೋತ್ಸವದ ವೇಳೆ ಸಹಕರಿಸಿದ ಹಿರಿಯ ಕೃಷಿಕ ಜಯದೇವ ಆರ್. ಹೆಗಡೆ ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಅವರಿಗೆ ಕಾಮ್ ಬಳಗದ ಶ್ರದ್ಧಾಂಜಲಿ.
- ಕಾಮ್ ಅಭ್ಯರ್ಥಿ ರಾಮಚಂದ್ರ ಆರ್. ಅವರು ಕಳೆದ ನವೆಂಬರ್‌ನಲ್ಲಿ ತೀವ್ರತರವಾದ ಅಪಘಾತಕ್ಕೀಡಾಗಿದ್ದರು. ಆದರೂ ಮೊದಲೇ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಎರಡು ತಿಂಗಳ ಅಸೈನ್‌ಮೆಂಟ್ ನೀಡಿದ್ದಲ್ಲದೆ ಇದೀಗ ಚೇತರಿಸಿಕೊಂಡು ಲೇಖನಿ ಕೈಗೆತ್ತಿಕೊಂಡಿದ್ದಾರೆ. ಅವರಿಗೆ ಶುಭಹಾರೈಕೆಗಳು.
- ಕಾಮ್ ಹಿತೈಷಿಗಳು ಕೇಂದ್ರದ ಚಟುವಟಿಕೆಗಳಿಗೆ ದೇಣಿಗೆ ನೀಡಬಹುದು; ಕೇಂದ್ರದ ವಾರ್ತಾಪತ್ರ (ಕಾಮ್ ನ್ಯೂಸ್), ಪ್ರಕಟಣೆಗಳು ಹಾಗೂ ಪ್ರಶಸ್ತಿಗಳನ್ನು ಪ್ರಾಯೋಜಿಸಬಹುದು. ವಿವರಗಳಿಗೆ ಕೇಂದ್ರವನ್ನು ಸಂಪರ್ಕಿಸಿ.

**ಫೆಲೋ ಕಾಲಂ**

# 'ಕಾಮ್' ಮತ್ತು ಬರಹದ ಬದುಕು

**– ಪ್ರಕಾಶ ಭಟ್**



ಕೃಷಿ ಮಾಧ್ಯಮ ಕೇಂದ್ರದ ಸಂಪರ್ಕಕ್ಕೆ ಬಂದು ವರುಷ ಮೂರಾಯಿತು. ಬರಹಗಳ ಮೂಲಕ ಸಮಾಜಕ್ಕೆ, ಬದುಕಿಗೆ ಇನ್ನಷ್ಟು ಹತ್ತಿರವಾಗುತ್ತಿರುವ ತೃಪ್ತಿ ನನಗಿದೆ. ಸುಪ್ತವಾಗಿದ್ದ, ಜನಸಾಮಾನ್ಯರಿಗಾಗಿ ಬರೆಯಬೇಕೆಂಬ ನನ್ನ ಹಂಬಲಕ್ಕೆ ಒಂದು ಅಡಿಪಾಯ ಹಾಕಿ, ಆಕಾರ ಕೊಟ್ಟು, ಬೆಳವಣಿಗೆಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿದ ಸಂಸ್ಥೆ ಕಾಮ್. ಇದರ ಮೂಲಕ ನಾನು ಪಡೆದ ಅನುಭವಗಳು ಅಪಾರ. ಬರವಣಿಗೆಯ ಆರಂಭದ ದಿನಗಳಲ್ಲಿ ವಿಜ್ಞಾನ ಬರಹಗಳಲ್ಲಿದ್ದ ನನ್ನ ಆಸಕ್ತಿ ಕ್ರಮೇಣ ಜನಪ್ರಿಯ ವಿಜ್ಞಾನ, ಪರಿಸರ, ಸಂಶೋಧನಾ ಲೇಖನಗಳತ್ತ ತಿರುಗಿತು. ಕೃಷಿ ಸಂಶೋಧನಾ ಕೇಂದ್ರದಲ್ಲಿ ನೌಕರಿ. 'ಕೇವಲ ಸಂಶೋಧನೆಯಿಂದ ಸುಖವಿಲ್ಲ; ಅದರ ಫಲಿತಾಂಶಗಳು ಜನಸಾಮಾನ್ಯರನ್ನೂ ತಲುಪಬೇಕು' ಎಂಬ ಹಂಬಲ. ಈ ಹಿನ್ನೆಲೆಯಲ್ಲಿ ಸಂಶೋಧನೆ ಆಧರಿಸಿದ ಕೆಲವು ಜನಪ್ರಿಯ ಲೇಖನಗಳನ್ನು ಬರೆದೆ. ಕ್ರಮೇಣ, ಜನಸಾಮಾನ್ಯರ ಬದುಕಿಗೆ ಹೆಚ್ಚು ಉಪಯುಕ್ತವಾದ, ಹತ್ತಿರವಾದ, ಪ್ರಾಯೋಗಿಕ ಲೇಖನವೇ ಮೇಲೆನಿಸಿತು. ತುಡಿತ ಗಟ್ಟಿಯಾಯಿತು. ಕೊಬ್ಬರಿ ಎಣ್ಣೆ ಉಪಯುಕ್ತತೆ ಕುರಿತು ಬರೆದ ಹಲವಾರು ಲೇಖನಗಳು ಅನೇಕರಿಗೆ ಇಷ್ಟವಾದವು. ನನ್ನಲ್ಲಿ ಉತ್ಸಾಹವನ್ನೂ ತುಂಬಿತು. ಕೃಷಿ, ಗ್ರಾಮೀಣ ಅಭಿವೃದ್ಧಿ ವಿಷಯ ಆಪ್ತವಾಯಿತು.

**ಫೋನಿನಲ್ಲೇ ಮೊದಲ ಪಾಠ**

ಮೂರು ವರ್ಷಗಳ ಹಿಂದಿನ ಘಟನೆ. ಅಡಿಕೆ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಕಳಿಸಿದ ಲೇಖನವೊಂದು ತಿರಸ್ಕೃತಗೊಂಡಿತ್ತು. ಬೇಸರವಾಗಿ ಕಾರಣ ಕೇಳಲು ಫೋನಿಸಿದ್ದೆ. ಸಂಪಾದಕ ಶ್ರೀ ಪಡ್ರೆ ಅವರೇ ಫೋನೆತ್ತಿಕೊಂಡರು. 'ಯಾಕೆ ಸಾರ್, ಒಳ್ಳೆ ಮಾಹಿತಿ ಇತ್ತಲ್ಲ...' ಎಂದೆ. 'ಸರಿ, ಅದು ಒಳ್ಳೆಯದು ಎಂದು ನಿಮಗೆ ಅನ್ನಿಸಿದೆ...ಆದರೆ ರೈತರಿಗೆ ಹಾಗೆ ಅನ್ನಿಸಬಹುದೇ' ಎನ್ನುತ್ತ ಬರೋಬ್ಬರಿ 30 ನಿಮಿಷ ಕೃಷಿ ಲೇಖನಗಳ ಕುರಿತು ಕ್ಲಾಸ್ ತೆಗೆದುಕೊಂಡರು. ಹಿಂದೆಂದೂ ಯಾರೂ ನನಗೆ ಅಷ್ಟು ತಾಳ್ಮೆ, ಕಳಕಳಿ ಮತ್ತು ಸ್ನೇಹದಿಂದ ಇಂಥ ವಿಚಾರ ಹೇಳಿರಲಿಲ್ಲ. ಅದೇ ನನಗೆ ಸಿಕ್ಕ ಮೊದಲ ಮತ್ತು ಅತ್ಯಂತ ಪ್ರಭಾವೀ ಪಾಠ.

**'ಕಾಮ್' ಆಸರೆ**

ಅನಂತರ ಸಿಕ್ಕಿದ್ದು ಕಾಮ್ ಆಸರೆ. ಅಲ್ಲಿ 'ತರಬೇತಿ ಸಿಕ್ಕಿತು' ಎನ್ನುವುದು ಕೇವಲ ಸೀಮಿತ ಅರ್ಥ. ನಿಜವಾಗಿ ದೊರೆತದ್ದು ಪ್ರೇರಣೆ, ಕೃಷಿ-ಗ್ರಾಮೀಣ ವಿಷಯಗಳ ಮಹತ್ವ-ವಿಶಾಲತೆಯ ಅರಿವು, ಬಾಂಧವ್ಯಪೂರ್ಣ ಮಾರ್ಗದರ್ಶನ, ಬರಹದ ಬದುಕಿಗೆ ಬುನಾದಿ. ಬೀಟಿ ಹತ್ತಿ ಕುರಿತಾಗಿ 'ಸಂಪಾದಕರಿಗೆ ಪತ್ರ'ದ ಅಂಕಣಕ್ಕೆ ಬರೆದ ಮೊದಲನೇ ಪತ್ರ ಬಳಿಕ ಶಿವರಾಂ ಪೈಲೂರು ಅವರ ಸೂಚನೆ ಮೇರೆಗೆ ಮಾಹಿತಿಪೂರ್ಣ ಉಪಯುಕ್ತ ಲೇಖನವಾಗಿ ('ಈಟಿಯಾಗಿ ಇರಿಯದಿರಲಿ ಬೀಟಿ') ಮಾರ್ಪಟ್ಟು, ಒಂದೇ ವಾರದಲ್ಲಿ ಪ್ರಕಟವಾಗಿದ್ದು ಸಂತಸ, ಸ್ಫೂರ್ತಿ ನೀಡಿತ್ತು. ಬರಹ ಸಕಾಲಿಕವಾದಾಗ ಒಂದು ಚಿಕ್ಕ ಸುಳಿವೂ ಸಹ ಉಪಯುಕ್ತ ಲೇಖನವೊಂದಕ್ಕೆ ಕಾರಣವಾಗಬಹುದು, ಪತ್ರಿಕೆಗೆ ಕಳಿಸಿದ ನಾಲ್ಕೇ ದಿನಗಳಲ್ಲಿ ಪ್ರಕಟವೂ ಆಗಬಹುದು ಎನ್ನುವುದಕ್ಕೆ ಇದು ಉದಾಹರಣೆ.

ಮೊದಮೊದಲು ಸುಳಿವು/ವಿಷಯಗಳಿಗಾಗಿ ತಡಕಾಡುತ್ತಿದ್ದ ನನಗೆ ಕ್ರಮೇಣ ನನ್ನ ಸುತ್ತಮುತ್ತಲೇ ಲೇಖನಕ್ಕೆ ವಸ್ತುವಾಗಬಲ್ಲ ಹಲವಾರು ಸಂಗತಿಗಳು ಕಾಣತೊಡಗಿದವು. ನಾನು ಒಂದು ನಿಯಮವನ್ನೇ ಮಾಡಿಕೊಂಡೆ: ರಜೆಯಲ್ಲಿ ನಮ್ಮ ಹಳ್ಳಿ ಉತ್ತರ ಕನ್ನಡ ಜಿಲ್ಲೆಯ ಕರ್ಕಿಗೆ ಹೋದಾಗಲೆಲ್ಲ ಕೃಷಿ, ಗ್ರಾಮೀಣ ವಿಷಯಕ್ಕೆ ಸಂಬಂಧಿಸಿದ ಒಂದಾದರೂ ಹೊಸ ವಿಷಯ ಸಂಗ್ರಹಿಸುತ್ತೇನೆ, ದಾಖಲಿಸುತ್ತೇನೆ ಅಂತ. ನನ್ನ ಊರಿನ ಕುರಿತು ನಾನರಿತದ್ದಕ್ಕಿಂತ ಅರಿಯದಿದ್ದದ್ದೇ ಎಷ್ಟೋ ವಿಚಾರಗಳಿವೆ ಎಂಬುದು ನನ್ನ ಅರಿವಿಗೆ ಬಂದಿದೆ. ತರಬೇತಿಯ ಅವಧಿಯಲ್ಲಿ ನನ್ನನ್ನು ನಿಜವಾಗಿ ಗಟ್ಟಿಮಾಡಿದ್ದು ಇಡ್ಡಿದು ಕುರಿತ ಅಧ್ಯಯನ ಪ್ರಬಂಧ. ಕೃಷಿ ಪತ್ರಿಕೋದ್ಯಮ ಹಾದಿಯಲ್ಲಿನ ಸುದೀರ್ಘ ಪಯಣಕ್ಕೆ ಇದು ಸಾಕಷ್ಟು ಧೈರ್ಯ ನೀಡಿದೆ.

ಕಾಮ್ ಕೋರ್ಸ್ ಮುಗಿಸಿದ ಬಳಿಕವೂ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಂಪರ್ಕ ದಲ್ಲಿದ್ದೇನೆ. ಇದರಿಂದ ನನಗೆ ಸಾಕಷ್ಟು ಪ್ರಯೋಜನವಾಗಿದೆ. ಹಲವಾರು ವರ್ಷಗಳ ಹಿಂದೆ ಪಡ್ರೆಯವರು ಹೊನ್ನಾವರದ ಹತ್ತಿರ ಕೆಸುವಿನ ಗಡ್ಡೆ ಮಾರಾಟ ಜೋರಾಗಿರುವುದು ಗಮನಿಸಿದ್ದರು. ಎರಡು ವರ್ಷದ ಹಿಂದೆ ಈ ಸುಳಿವನ್ನು ನನಗೆ ದಾಟಿಸಿದ್ದರು. ಆದರೆ ನಾನು ಎಷ್ಟೇ ಪ್ರಯತ್ನಿಸಿದ್ದರೂ ಈ ಬಗ್ಗೆ ವಿವರ ಸಿಕ್ಕಿರಲಿಲ್ಲ. ಈ ವರ್ಷ ಅಕಸ್ಮಾತಾಗಿ ಸಿಕ್ಕ 'ಕೊಕ್ಕೆ' ಹಿಡಿದು ಹೊರಟಾಗ ಸುತ್ತಮುತ್ತ ಸುಮಾರು 35 ಟನ್ ಕರಿಕೆಸುವಿನ ಗಡ್ಡೆಗಳ ವಹಿವಾಟು ನಡೆಯುತ್ತಿರುವ ಆಶ್ಚರ್ಯಕರ ವಿವರ ದೊರೆಯಿತು. ಅದೇ ಜಾಡಿನಲ್ಲಿ ಸಾಗಿ ಲೇಖನ ಬರೆದೆ.

**ಸಿಹಿ ನೀರುಳ್ಳಿ ಸೆಳೆತ**

ಸಿಹಿ ನೀರುಳ್ಳಿ ನಮ್ಮ ಊರಿನ ವಿಶೇಷ ಬೆಳೆ. ಆದರೂ ಅದರ ವಿಶೇಷತೆ ನನಗೆ ಹಿಂದೆಂದೂ ಮಹತ್ವದ್ದೆಂದು ಅನ್ನಿಸಿರಲೇ ಇಲ್ಲ. ತರಬೇತಿಯ ಸಮಯದಲ್ಲೇ ಪ್ರಮುಖ ದೈನಿಕವೊಂದರಲ್ಲಿ ಈ ಬೆಳೆಯ ಕುರಿತು ನೀಡಿದ ತಪ್ಪಾದ ಚಿತ್ರಣ, ಅಂಕಿ-ಸಂಖ್ಯೆಗಳು ನನ್ನನ್ನು ಎಚ್ಚರಿಸಿತು. ಹೀಗಾಗಿ ಸತ್ಯಾಸತ್ಯತೆ ತಿಳಿಯಲು ಅದರ ಹಿಂದೆ ಬಿದ್ದೆ. ಬೆಳೆಗಾರರ ನೋವು-ನಲಿವು ತಿಳಿಯಲು ಸಾಕಷ್ಟು ಆಳಕ್ಕಿಳಿದೆ.

ಕಳೆದ ಮೂರು ವರ್ಷಗಳಿಂದ ಈ ಬೆಳೆಗೆ ಸಂಬಂಧಿಸಿ ರೈತರು, ವರ್ತಕರು, ಮಧ್ಯವರ್ತಿಗಳು, ಗ್ರಾಹಕರು, ತೋಟಗಾರಿಕೆ ವಿಭಾಗ, ಕೃಷಿ ವಿಜ್ಞಾನ ಕೇಂದ್ರಗಳು, ಪೂನಾದ ನೀರುಳ್ಳಿ ಸಂಶೋಧನಾ ಕೇಂದ್ರ – ಹೀಗೆ ಹಲವು ಮೂಲಗಳನ್ನು ಸಂಪರ್ಕಿಸಿದ್ದೇನೆ. ಈ ಸಂದರ್ಭದಲ್ಲಿ ಬೆಳೆಯ ಅನೇಕ ಮುಖಗಳು, ಸಮಸ್ಯೆಗಳು ಹಾಗೂ ರೈತರೇ ಕಂಡುಕೊಂಡ ಪರಿಹಾರಗಳ ಪರಿಚಯವಾಯಿತು. ಇವನ್ನೆಲ್ಲ ಲೇಖನರೂಪದಲ್ಲಿ ಬರೆದೆ. ಆರು ವರ್ಷಗಳ ಹಿಂದೆ 'ಅಡಿಕೆ ಪತ್ರಿಕೆ' ಕುಮಟಾ ನೀರುಳ್ಳಿಯ ನೇರ ಮಾರಾಟದ ಸಾಧ್ಯತೆ ಕುರಿತು ಬೆಳಕುಚೆಲ್ಲಿತ್ತು. ಅದನ್ನು 'ಫಾಲೊ ಅಪ್' ಮಾಡಲು ಹೋದಾಗ, ರೈತರೇ ಮಧ್ಯವರ್ತಿಗಳಾಗಿ ಬೆಳೆದು ನಿಂತ ವಿಶಿಷ್ಟ ಮಾರಾಟ ಪದ್ಧತಿಯ ಅರಿವಾಯಿತು. ಅದು ರೈತರ ವಿಜಯವಾಗಿತ್ತು. ಈ ಬೆಳೆಯ ಕಾದಿಡುವಿಕೆ ಸಮಸ್ಯೆ ಕುರಿತು ಅಡಿಕೆ ಪತ್ರಿಕೆಯಲ್ಲಿ ಪ್ರಶ್ನೆ ತೂರಿ ಬಿಟ್ಟಿದ್ದೆ. ಇದಕ್ಕೆ ಸಹಾಯಕ ತೋಟಗಾರಿಕಾ ನಿರ್ದೇಶಕಿಯೊಬ್ಬರು ನೀಡಿದ ಪ್ರತಿಕ್ರಿಯೆ ರಾಜ್ಯದೆಲ್ಲೆಡೆಯಿಂದ ಸಾಕಷ್ಟು ಉಪಯುಕ್ತ ಮಾಹಿತಿ ಸಂಗ್ರಹಿಸಲು ಕಾರಣವಾಯಿತು. ಇದೀಗ ಈ ಬೆಳೆಯನ್ನು ಅಧ್ಯಯನ ಮಾಡಲು ಪೂನಾದ ನೀರುಳ್ಳಿ ಸಂಶೋಧನಾ ಕೇಂದ್ರ ಮತ್ತು ರಾಜ್ಯದ ವಿಜ್ಞಾನಿಗಳು ಮುಂದೆಬಂದಿದ್ದಾರೆ, ಆ ಪ್ರದೇಶಕ್ಕೆ ಭೇಟಿಯನ್ನೂ ನೀಡಿದ್ದಾರೆ. ಓದುಗರೊಬ್ಬರು ಈ ಬೆಳೆಗೆ ಜೀಐ (Geographical Indicator) ಪ್ರಮಾಣಪತ್ರ ದೊರಕಿಸಿಕೊಡುವಲ್ಲಿ ಸಹಾಯ ಮಾಡುವುದಾಗಿ ತಿಳಿಸಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

ಇತ್ತೀಚೆಗೆ ಸಂಯುಕ್ತ ಕರ್ನಾಟಕದಲ್ಲಿ ಇದೇ ನೀರುಳ್ಳಿಯನ್ನು 'ಸಲಾಡ್ ನೀರುಳ್ಳಿ' ಎಂದು ಪರಿಚಯಿಸಿಲು ಪ್ರಯತ್ನಿಸಿದೆ. ಉತ್ತರ ಕರ್ನಾಟಕದ 25ಕ್ಕೂ ಹೆಚ್ಚು ರೈತರು ಫೋನ್ ಮಾಡಿ ಇದನ್ನು ಬೆಳೆಯುವ ವಿಧಾನ, ಬೀಜಗಳ ಲಭ್ಯತೆ, ಮಾರುಕಟ್ಟೆ ಕುರಿತು ವಿಚಾರಿಸಿದರು. ರೈತರ ಆಸಕ್ತಿ ಕಂಡು, ಪತ್ರಿಕೆಯವರು ಅಪೇಕ್ಷಿಸಿದಂತೆ ಇನ್ನೊಂದು ಲೇಖನ ಬರೆಯಬೇಕಾಯಿತು. ಹೀಗೆ ನಮ್ಮ ಲೇಖನ ವಿಭಿನ್ನ ರೀತಿಯ ಪ್ರಭಾವ ಬೀರುವ ಸಾಧ್ಯತೆಯೂ ಇದ್ದು, ರೈತರಿಗೆ ಬೇಕಾದ ಮಾಹಿತಿ ಒದಗಿಸುವುದು ನಮ್ಮ ಕರ್ತವ್ಯ.

ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವುದೇ ನಮ್ಮ ಗುರಿ ಎಂದಿದ್ದರೆ ಅದು ನಿಧಾನವಾಗಿ ಕರಗಿಹೋಗುತ್ತದೆ. ಸ್ವತ: ಗೇರು ಸಂಶೋಧನಾ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರೂ, ಗೇರು ಬೆಳೆ ಕುರಿತಾದ ನನ್ನ ಲೇಖನಕ್ಕೆ ರೈತರು ಸ್ಪಂದಿಸಿ, ಕೇಳಿದ ಪ್ರಶ್ನೆಗಳಿಗೆ ದಿಗಿಲುಗೊಂಡು 'ಅಂ, ಇದು ಗೊತ್ತೇ ಇಲ್ಲವಲ್ಲ' ಅಂದುಕೊಂಡದ್ದೂ ಇದೆ. ಲೇಖನಗಳು ಕೆಲವರಿಗಾದರೂ ತಲುಪಿದರೆ, ಕೆಲವರಾದರೂ ಪ್ರತಿಕ್ರಿಯೆ ನೀಡಿದರೆ, ಕೆಲವರಿಗಾದರೂ ಪ್ರಯೋಜನವಾದರೆ ಅದು ಬರವಣಿಗೆಯ ಗೆಲುವು.

**ಬದಲಾವಣೆ**

ಕೃಷಿ, ಪರಿಸರ, ಗ್ರಾಮೀಣ ರಂಗದ ಅವಶ್ಯಕತೆಗಳು ಮತ್ತು ಅವುಗಳ ಪೂರೈಕೆಯ ರೀತಿನೀತಿಗಳಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಇದಕ್ಕೆ ಬರಹಗಾರರಾದ ನಾವು ಹೊಂದಿಕೊಳ್ಳಬೇಕಿದೆ. ಮಾಹಿತಿ ಸಂಗ್ರಹ, ವಿತರಣೆ ಮಾಡುವಲಿ ಎಲೆಕ್ಟ್ರಾನಿಕ್ ಮಾಧ್ಯಮವನ್ನು ಸಮರ್ಪಕವಾಗಿ ಉಪಯೋಗಿಸಿ ಕೊಳ್ಳಬೇಕಿದೆ. ಹಲವು ಪತ್ರಿಕೆಗಳು 'ಕಾಗದರಹಿತ' ಸಂಪರ್ಕ ವ್ಯವಸ್ಥೆ ಅಳವಡಿಸಿ ಕೊಂಡಿವೆ. ಮಾಹಿತಿ ಹಕ್ಕು ಕಾಯಿದೆ ಕೆಲವೊಮ್ಮೆ ಸರಿಯಾದ ವಿವರ, ಪೂರಕ ಮಾಹಿತಿ ಪಡೆಯಲು ನೆರವಾಗಬಹುದು. ರಾಜ್ಯ ಸರಕಾರದ 'ಸುವರ್ಣಜಲ' ಯೋಜನೆ ಪುತ್ತೂರು ತಾಲೂಕಿನಲ್ಲಿ ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆ ಎಂಬ ಬಗ್ಗೆ ಅಧ್ಯಯನಕ್ಕೆ ಹೊರಟ ನನಗೆ ಅನೇಕ ಕುತೂಹಲಕರ ಮಾಹಿತಿ ಸಿಕ್ಕಿದ್ದು ಈ ಮಾರ್ಗದಿಂದಲೇ.

**ವಿಳಾಸ**: ತಾಂತ್ರಿಕ ಅಧಿಕಾರಿ, ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ
ಅಂಚೆ: ದರ್ಬೆ, ಪುತ್ತೂರು 574 202
08251- 236432; prakashbhat0@gmail.com

**ಕಾಮ್ ಫೆಲೋಗಳಲ್ಲಿ ವಿನಂತಿ**

- ಕನಿಷ್ಠ ತಿಂಗಳಿಗೆ ಒಂದಾದರೂ ಲೇಖನ ಬರೆಯಿರಿ.
- ನಿಮ್ಮ ಪ್ರಕಟಿತ ಲೇಖನಗಳ ವಿವರಗಳನ್ನು (ಶೀರ್ಷಿಕೆ, ಪ್ರಕಟಗೊಂಡ ಪತ್ರಿಕೆ, ದಿನಾಂಕ) ತಿಂಗಳಿಗೊಮ್ಮೆ ನಮಗೆ ಈಮೇಲ್ ಅಥವಾ ಪತ್ರಮುಖೇನ ಕಳುಹಿಸಿ ಕೊಡಿ.
- ನಿಮಗೆ ಸಮೀಪವಿರುವ ಈ ವರ್ಷದ ಕಾಮ್ ಅಭ್ಯರ್ಥಿಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಅವರಿಗೆ ಅಗತ್ಯ ಮಾಹಿತಿ, ಮಾರ್ಗದರ್ಶನ ನೀಡಿ.
- ಕಾಮ್ ತರಬೇತಿಯ ಬಗ್ಗೆ ಆಸಕ್ತರಿಗೆ ಹೇಳಿ.
- ಕೇಂದ್ರದ ಪ್ರಕಟಣೆಗಳ ಮಾರಾಟದಲ್ಲಿ ಕೈಜೋಡಿಸಿ. ಉಡುಗೊರೆ ನೀಡುವ ಸಂದರ್ಭದಲ್ಲಿ ಕಾಮ್ ಪುಸ್ತಕಗಳನ್ನೇ ಬಳಸಿ.
- ಉದ್ಯೋಗ, ವಿಳಾಸದಲ್ಲಿ ಬದಲಾವಣೆಯಾದಾಗ ತಿಳಿಸಿ.

## ಕಾಮ್ ಅಭ್ಯರ್ಥಿಗಳ ಇತ್ತೀಚಿನ ಪ್ರಕಟಿತ ಲೇಖನಗಳು

**ಪದ್ಮಕ್ಕನ ಹಿಟ್ಟಿನ ಗಿರಣಿ**
(ವಿಜಯ ಕರ್ನಾಟಕ, 14.04.2010)
– ರಮಾ ಅರಕಲಗೂಡು

**ಸೇವಂತಿಯೇ ಕುಂಡದಲ್ಲಿ ಗಮ್ಮಂತಿಯೇ**
(ಉದಯವಾಣಿ, 26.04.2010)
– ರಮಾ ಅರಕಲಗೂಡು

**ಸಿರಿಧಾನ್ಯಗಳಿಂದ ವೈವಿಧ್ಯ**
(ಸುಧಾ, 6.05.2010)
– ರಮಾ ಅರಕಲಗೂಡು

**ಬದುಕು ಕಟ್ಟಿದ ಪೇಪರ್ ಬ್ಯಾಗ್**
(ಪ್ರಜಾವಾಣಿ, 22.05.2010)
– ರಮಾ ಅರಕಲಗೂಡು

**ಉತ್ತಮ ಆದಾಯ ತರುವ ಶುಂಠಿ ಬೆಳೆ**
(ಸಂಯುಕ್ತ ಕರ್ನಾಟಕ, 10.03.2010)
– ಸುರೇಶ್ ಧಾರವಾಡಕರ್

**ವಿರಾಮದ ಸಮಯದಲ್ಲಿ ಅರಳಿದ ತೋಟ**
(ಸಂಯುಕ್ತ ಕರ್ನಾಟಕ, 31.03.2010)
– ಸುರೇಶ್ ಧಾರವಾಡಕರ್

**ಮೇಟಿ ವಿದ್ಯೆಗೆ ಲೇಖನಿ ಸೊಬಗು**
(ಸಂಯುಕ್ತ ಕರ್ನಾಟಕ, 7.04.2010)
– ಸುರೇಶ್ ಧಾರವಾಡಕರ್

**ಛಲ ಬಿಡದ ಮಹಿಳಾ ಉದ್ಯಮಿ**
(ಸಂಯುಕ್ತ ಕರ್ನಾಟಕ, 21.04.2010)
– ಸುರೇಶ್ ಧಾರವಾಡಕರ್

**ಶೆಟ್ಟರ ಕೈಹಿಡಿದ ರೆಡ್‌ಲೇಡಿ**
(ವಿಜಯ ಕರ್ನಾಟಕ, 1.02.2010)
– ಕೆ. ಶಶಿಧರ್ ಹೆಮ್ಮಣ್ಣ

**ಘಮ ಘಮ ಘಮಾಡಿಸ್ತಾವ ಶಂಕರಪುರ ಮಲ್ಲಿಗಿ...**
(ವಿಜಯ ಕರ್ನಾಟಕ, 8.04.2010)
– ಕೆ. ಶಶಿಧರ್ ಹೆಮ್ಮಣ್ಣ

**ದಲ್ಲಾಳಿಗಳ ಮುಷ್ಟಿಯಲ್ಲಿ ಶಂಕರಪುರ ಮಲ್ಲಿಗೆ**
(ಪ್ರಜಾವಾಣಿ, 03.06.2010)
– ಕೆ. ಶಶಿಧರ್ ಹೆಮ್ಮಣ್ಣ

**ರೈತರಿಗೆ ಸಂತಸ ತಂದ 'ಪುಷ್ಪ ಕೃಷಿ'**
(ಸಿರಿ ಸಮೃದ್ಧಿ, ಏಪ್ರಿಲ್ 2010)
– ಗಂಗಾ ಅಂಕದ

**ಸುಳ್ಳದಲ್ಲಿ ಸಾವಯವ ನಿತ್ಯ ಸತ್ಯ**
(ಸಿರಿ ಸಮೃದ್ಧಿ, ಮೇ 2010)
– ಗಂಗಾ ಅಂಕದ

**ಉದಿಬದಿ–ಜಾದೂ**
(ಸಿರಿ ಸಮೃದ್ಧಿ, ಮೇ 2010)
– ಗಂಗಾ ಅಂಕದ

**ಬೀಡು ಬಿಟ್ಟಲ್ಲಿ ತೋಟ**
(ಕನ್ನಡಪ್ರಭ, 14.04.2010)
– ಕೆ. ವಿ. ಸರಸ್ವತಿ

**ಇದು 'ಪಿಕೊ' ಜಮಾನಾ**
(ಸಿರಿ ಸಮೃದ್ಧಿ, ಮೇ 2010)
– ಸುನೀತಾ ಕುಸುಗಲ್ಲ

**Scent of the Jasmine**
(Deccan Herald, June 8, 2010)
– Shashidhar Hemmanna

ಕಾಮ್ ನ್ಯೂಸ್ ತಲುಪಿದೆ. ಕಾಫಿ ನಾಡಿನಲ್ಲಿ ದಶಮಾನೋತ್ಸವ ನಡೆಸುತ್ತಿರುವುದು ಸಂತಸ ತಂದಿದೆ. ಮಲೆನಾಡಿನ ಇನ್ನೊಂದು ಅನುಭವ ಸಿಗುವ ಖುಷಿ. ಕಾಮ್ ಫೆಲೋ ಶಿವಣ್ಣನವರ ಲೇಖನದಿಂದ ಗ್ರಾಮೀಣ ಜನರಿಗಾದ ಪ್ರಯೋಜನ ನಮಗೊಂದು ಪಾಠ.

**– ಜಿ. ಗಣಪತಿ ಭಟ್, ಹಾರೋಹಳ್ಳಿ**

## ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿ

ಕೃಷಿ ಮಾಧ್ಯಮ ಕೇಂದ್ರ 2010–11ನೇ ಸಾಲಿನ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಬರುವ ಅಕ್ಟೋಬರ್‌ನಲ್ಲಿ ಶುರುವಾಗಲಿರುವ ಅಂಚೆ ತೆರಪಿನ (ಕರೆಸ್ಪಾಂಡೆನ್ಸ್) ತರಬೇತಿ ಒಂದು ವರ್ಷ ಅವಧಿಯದ್ದಾಗಿರುತ್ತದೆ. ಕೃಷಿ–ಗ್ರಾಮೀಣ ಪತ್ರಿಕೋದ್ಯಮದ ಮಹತ್ವ ಮತ್ತು ಸ್ವರೂಪ, ಬರಹದ ಪ್ರಕಾರಗಳು, ಬರವಣಿಗೆಯ ತಂತ್ರಗಾರಿಕೆ, ಛಾಯಾ ಪತ್ರಿಕೋದ್ಯಮ ಇವೇ ಮುಂತಾದ ವಿಷಯಗಳ ಕುರಿತು ಅನುಭವಿ ಬರಹಗಾರರಿಂದ ತರಬೇತಿ ನೀಡಲಾಗುವುದು. ಪ್ರಾಯೋಗಿಕ ಕಲಿಕೆಗೆ ಹೆಚ್ಚಿನ ಅವಕಾಶವಿದೆ. ಕೃಷಿಕರು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರು, ಕೃಷಿ–ಗ್ರಾಮೀಣ ಸಂಬಂಧಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಕೆಲಸಮಾಡುತ್ತಿರುವವರಿಗೆ ಈ ತರಬೇತಿಯಿಂದ ವಿಶೇಷ ಪ್ರಯೋಜನವಿದೆ. ಇತರ ಆಸಕ್ತರೂ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಹತೆ – ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಕಲಿಕೆ. ಕನ್ನಡ ಚೆನ್ನಾಗಿ ಬರೆಯಬಲ್ಲ ಇತರ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಬಹುದು. ವಯೋಮಿತಿ 50 ವರ್ಷ.

ಮಾಹಿತಿ ಪತ್ರ ಪಡೆದುಕೊಳ್ಳಲು ಕೊನೆಯ ದಿನ ಜುಲೈ 30, 2010. ಆಗಸ್ಟ್ 15ರ ಒಳಗಾಗಿ ಅರ್ಜಿ ನಮಗೆ ತಲುಪಬೇಕು. ಆಗಸ್ಟ್ 31ಕ್ಕೆ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟಿಸಲಾಗುವುದು. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಅಕ್ಟೋಬರ್ 28ರಿಂದ 31ರ ವರೆಗೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯ ದೇವವೃಂದದಲ್ಲಿ ಪ್ರಾಥಮಿಕ ಶಿಬಿರ ನಡೆಸಲಾಗುವುದು. ಇದರಲ್ಲಿ ಅನುಭವಿ ಅಭಿವೃದ್ಧಿ ಬರಹಗಾರರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು ಶಿಬಿರಾರ್ಥಿಗಳಿಗೆ ಲೇಖನ ಬರವಣಿಗೆಯಲ್ಲಿ ಮಾಹಿತಿ–ಮಾರ್ಗದರ್ಶನ ನೀಡಲಿದ್ದಾರೆ. ಕ್ಷೇತ್ರಭೇಟಿ ಹಾಗೂ ಬರವಣಿಗೆಯಲ್ಲಿ ಪ್ರಾಯೋಗಿಕ ತರಬೇತಿ ಕೂಡ ಇರುತ್ತದೆ. ಮಾಹಿತಿ ಪತ್ರ, ಅರ್ಜಿ ಮತ್ತಿತರ ವಿವರಕ್ಕಾಗಿ 50 ರೂಪಾಯಿ ಮೌಲ್ಯದ ಅಂಚೆಚೀಟಿಯನ್ನು ಜೊತೆಯಲ್ಲಿಟ್ಟು ಕೇಂದ್ರಕ್ಕೆ ಪತ್ರ ಬರೆಯಬೇಕಾಗಿ ಕೋರಿಕೆ.

## ಕೃಷಿಪತ್ರಿಕೋದ್ಯಮ ಪ್ರಶಸ್ತಿ

- ಕೃಷಿ ಮಾಧ್ಯಮ ಕೇಂದ್ರ 2010ನೇ ಸಾಲಿನ ರಾಜ್ಯಮಟ್ಟದ ಕೃಷಿಪತ್ರಿಕೋದ್ಯಮ ಪ್ರಶಸ್ತಿಗೆ ಪ್ರವೇಶಗಳನ್ನು ಆಹ್ವಾನಿಸಿದೆ. ಕನ್ನಡದಲ್ಲಿ ಅರ್ಥಪೂರ್ಣ ಕೃಷಿ–ಗ್ರಾಮೀಣ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಕೇಂದ್ರ ಈ ಪ್ರಶಸ್ತಿ ಸ್ಥಾಪಿಸಿದೆ. ಆಸಕ್ತರು ಸೆಪ್ಟೆಂಬರ್ 2009ರಿಂದ ಆಗಸ್ಟ್ 2010ರ ನಡುವೆ ಯಾವುದೇ ಪತ್ರಿಕೆ ಅಥವಾ ನಿಯತಕಾಲಿಕದಲ್ಲಿ ಪ್ರಕಟಗೊಂಡ ಕೃಷಿಕಪರ ಬರಹವನ್ನು ಕಳುಹಿಸಿ ಕೊಡಲು ಕೋರಲಾಗಿದೆ. ಒಬ್ಬರು ಗರಿಷ್ಠ ಎರಡು ಲೇಖನಗಳನ್ನು ಕಳುಹಿಸಬಹುದು. ಲೇಖಕರು ತಮ್ಮ ಪೂರ್ಣ ವಿಳಾಸ ಹಾಗೂ ಸಣ್ಣ ಪರಿಚಯ ಬರೆಯುವುದು ಅಗತ್ಯ. ಪ್ರವೇಶದೊಂದಿಗೆ ಬಂದ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಪ್ರವೇಶದೊಂದಿಗೆ ಹತ್ತು ರೂಪಾಯಿ ಅಂಚೆಚೀಟಿ ಕಳುಹಿಸಲು ಕೋರಿಕೆ.
- ಅಡಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡ ಕಾಮ್ ಬಳಗದವರ (ಫೆಲೋಗಳು ಹಾಗೂ ಅಭ್ಯರ್ಥಿಗಳು) 10 ಉತ್ತಮ ಲೇಖನಗಳಿಗೆ ಬಹುಮಾನ ನೀಡಲಾಗುವುದು. 2009ರ ಅಕ್ಟೋಬರ್‌ನಿಂದ 2010ರ ಸೆಪ್ಟೆಂಬರ್ ಅವಧಿಯಲ್ಲಿ ಪ್ರಕಟಗೊಳ್ಳುವ ಲೇಖನಗಳನ್ನು ಬಹುಮಾನಕ್ಕಾಗಿ ಪರಿಗಣಿಸುತ್ತೇವೆ.
- ಪವಾಡ ಧಾನ್ಯಗಳು ಅಥವಾ ಸಿರಿಧಾನ್ಯಗಳನ್ನು (ಸಾವಿ, ನವಣೆ, ಸಜ್ಜೆ, ಅರ್ಕಾ, ಉದಲು, ಕೊರ್ಲು, ರಾಗಿ ಇತ್ಯಾದಿ) ಕುರಿತು ಕನ್ನಡದಲ್ಲಿ ಪ್ರಕಟವಾಗುವ ಕಾಮ್ ಬಳಗದವರ (ಸಂಪನ್ಮೂಲ ವ್ಯಕ್ತಿಗಳೂ ಸೇರಿದಂತೆ) ಅತ್ಯುತ್ತಮ ಲೇಖನಕ್ಕೆ ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ಬಹುಮಾನ ನೀಡಲಿದೆ. ಮೇಲಿನ ಅವಧಿಯಲ್ಲಿ ಪ್ರಕಟಗೊಂಡ ಲೇಖನಗಳು ಈ ಬಹುಮಾನ ಯೋಜನೆಗೆ ಅರ್ಹ.

**ಮೇಲಿನ ಮೂರು ಪ್ರಶಸ್ತಿ/ಬಹುಮಾನಗಳಿಗೆ ಪ್ರವೇಶ ಸ್ವೀಕರಿಸಲು ಕೊನೆಯ ದಿನಾಂಕ : ಸೆಪ್ಟೆಂಬರ್ 5, 2010.**

## ವಿಶೇಷ ಪುರಸ್ಕಾರ

ಕೃಷಿ ಮಾಧ್ಯಮ ಕೇಂದ್ರ ತನ್ನ ದಶಮಾನೋತ್ಸವದ ಅಂಗವಾಗಿ ವಿಶೇಷ ಪುರಸ್ಕಾರ ಸ್ಥಾಪಿಸಿದೆ. ಕೃಷಿ–ಗ್ರಾಮೀಣ ಪತ್ರಿಕೋದ್ಯಮ ಕ್ಷೇತ್ರಕ್ಕೆ ಪೂರಕವಾಗಿ ಸದ್ದಿಲ್ಲದೆ ಕೆಲಸ ಮಾಡುತ್ತಿರುವವರನ್ನು ಗುರುತಿಸಿ ಗೌರವಿಸುವುದು ಈ ಪುರಸ್ಕಾರದ ಉದ್ದೇಶ. ಕೆಲವರು ಕೃಷಿ ಬರಹಕ್ಕೆ ವಸ್ತುವಾಗಬಲ್ಲ ಅಂಶಗಳನ್ನು ಗುರುತಿಸಿ ಆ ಬಗ್ಗೆ ತಾವು ಬಲ್ಲ ಕೃಷಿ ಪತ್ರಿಕೆಗಳ ಸಂಪಾದಕರು ಅಥವಾ ಕೃಷಿ ಲೇಖಕರಿಗೆ ತಿಳಿಸುತ್ತಾರೆ. ಇನ್ನು ಕೆಲವರು ತಮ್ಮ ಸುತ್ತಲಿನ ಆಸಕ್ತ ಓದುಗರ ಮನವೊಲಿಸಿ ಅವರಿಂದ ಚಂದಾ ಹಣ ಸಂಗ್ರಹಿಸಿ ತಾವು ಇಷ್ಟಪಡುವ ಕೃಷಿ ಪತ್ರಿಕೆಗೆ ಕಳುಹಿಸಿಕೊಡುತ್ತಾರೆ. ಮತ್ತೆ ಕೆಲವರು ನಾಲ್ಕಾರು ಕೃಷಿ ಪತ್ರಿಕೆಗಳ ಎಲ್ಲ ಸಂಚಿಕೆಗಳನ್ನು ಒಪ್ಪವಾಗಿ ಜೋಡಿಸಿಟ್ಟು ಜ್ಞಾನದಾಹಿ ಓದುಗರ ಮುಂದಿಡುತ್ತಾರೆ. ದಿನಪತ್ರಿಕೆಗಳ ಕೃಷಿಪುಟಗಳಲ್ಲಿ ಬರುವ ಉಪಯುಕ್ತ ಲೇಖನಗಳನ್ನು ಸಂಗ್ರಹಿಸಿಡುವವರು, ಕೃಷಿ ಲೇಖನಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸುವವರು, ಕೃಷಿ ಮೇಳ–ಕೃಷಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಸದಾ ಹೊಸ ಸಂಗತಿಗಳತ್ತ ಕಣ್ಣಿಟ್ಟವರು ಹೀಗೆ ಎಲ್ಲೋ ಮೂಲೆಯಲ್ಲಿ ಇದ್ದಾರೆ. ಹೀಗೆ ಕೃಷಿಕಪರ ಕೃಷಿ ಮಾಧ್ಯಮದ ಅಗತ್ಯ ಹಾಗೂ ಮಹತ್ವವನ್ನು ಮನಗಂಡವರು ಮತ್ತು ಆ ವಲಯಕ್ಕೆ ತಮ್ಮದೇ ಕೊಡುಗೆ ನೀಡುತ್ತಿರುವವರ ಪೈಕಿ ಐದು ಮಂದಿಯನ್ನು ಪ್ರಶಸ್ತಿಗೆ ಆರಿಸಲಾಗುವುದು. ಇಂಥವರ ಬಗ್ಗೆ ತಿಳಿದವರು ದಯವಿಟ್ಟು ಅವರನ್ನು ಕೇಂದ್ರಕ್ಕೆ ಪರಿಚಯಿಸಬೇಕಾಗಿ ವಿನಂತಿ. ಅವರ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಚಟುವಟಿಕೆ ಬಗ್ಗೆ ಸಣ್ಣದೊಂದು ಟಿಪ್ಪಣಿಯನ್ನು ಕಳುಹಿಸಿದರೆ ಅನುಕೂಲ.

**ವಿಳಾಸ: ಕೃಷಿ ಮಾಧ್ಯಮ ಕೇಂದ್ರ, 119, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ – 580 008.**

ನನ್ನ ಮೊದಲ ಲೇಖನ 'ಉತ್ತಮ ಆದಾಯ ತರುವ ಶುಂಠಿ ಬೆಳೆ' ಸಂಯುಕ್ತ ಕರ್ನಾಟಕ ದಿನಪತ್ರಿಕೆಯ (ಮಾರ್ಚ್ 10, 2010) ಕೃಷಿ ಪುರವಣಿಯಲ್ಲಿ ಪ್ರಕಟವಾದಾಗ ತುಂಬಾ ಸಂತೋಷವಾಯಿತು. ಅದೇ ಖುಷಿಯಲ್ಲಿ ಬೆಳಗ್ಗೆ 9 ಗಂಟೆಗೆ ಕಛೇರಿ ಕೆಲಸಕ್ಕೆ ಹೊರಟು ನಿಂತಾಗ ಹಾವೇರಿ ಜಿಲ್ಲೆಯ ಹಾನಗಲ್‌ದಿಂದ ರೈತರೊಬ್ಬರು ನನ್ನ ಮೊಬೈಲ್‌ಗೆ ಕರೆ ಮಾಡಿ 'ನಮ್ಮದು ಎರಿಭೂಮಿ ಇದೆ. ಅದರಲ್ಲಿ ಶುಂಠಿ ಬೆಳೆಯಬಹುದೇ' ಎಂದು ಕೇಳಿದಾಗ ನನಗೆ ಆಶ್ಚರ್ಯ. ತಕ್ಷಣ ಏನು ಹೇಳಬೇಕು ಎಂದು ತಿಳಿಯಲಿಲ್ಲ. ಸಾವರಿಸಿಕೊಂಡು 'ಲೇಖನದಲ್ಲಿ ಕೃಷಿಕ ಪ್ರಸನ್ನ ಹೆಗಡೆ ಅವರ ಮೊಬೈಲ್ ಸಂಖ್ಯೆ ಇದೆ ಅದಕ್ಕೆ ಕರೆ ಮಾಡಿರಿ, ಅವರು ತಮಗೆ ಬೇಕಾದ ಸೂಕ್ತ ಮಾಹಿತಿ ಕೊಡುತ್ತಾರೆ' ಎಂದು ಹೇಳಿದೆ. ಮತ್ತೆ ಯಾರು ಕರೆ ಮಾಡಿ ಏನು ಕೇಳುತ್ತಾರೆ ಗೊತ್ತಿಲ್ಲ ಎಂದುಕೊಂಡು ನಾನು ಬರೆದ ಲೇಖನವನ್ನು ಎರಡೆರಡು ಬಾರಿ ಓದಿದೆ. ಸುಧಾರಿಸಿಕೊಳ್ಳುತ್ತಿದ್ದಂತೆ ಸಿಂಧಗಿ ತಾಲೂಕು ಬಿಂಜಲವಾಡಿ ಗ್ರಾಮದ ರೈತ ಬಿರಾದಾರ್, ನಂತರ ಬಿಜಾಪುರದ ಬಿಎಲ್‌ಡಿ ಕಾಲೇಜಿನ ಡಾ. ವಿಜೇಂದ್ರ ಕುಲಕರ್ಣಿ ಅವರ ಕರೆ, ಗುಲಬರ್ಗಾದಿಂದ, ಧಾರವಾಡ ತಾಲೂಕ ಕುರುಬಗಟ್ಟಿ ಗ್ರಾಮದಿಂದ, ಗದಗದಿಂದ, ಗೌರಿಬಿದನೂರು, ಜೇವರ್ಗಿ ಹೀಗೆ ರಾಜ್ಯದ ವಿವಿಧೆಡೆಗಳಿಂದ ಮೂರ್ನಾಲ್ಕು ದಿನಗಳ ಕಾಲ ಹಲವಾರು ಕರೆಗಳು. ಈ ನಡುವೆ ಪ್ರಸನ್ನ ಹೆಗಡೆ ಅವರಿಂದ ಫೋನ್. ಲೇಖನದ ಬಗ್ಗೆ ಮೆಚ್ಚುಗೆಯ ಮಾತು. ನನಗೆ ಖುಷಿಯೋ ಖುಷಿ. ಇದಕ್ಕೆ ಕಾರಣರಾದ ಕಾಮ್‌ನ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೆ ಕೃತಜ್ಞತೆಗಳು.

**– ಸುರೇಶ. ನಿ. ಧಾರವಾಡಕರ, ಶಕ್ತಿನಗರ**

## ಕಾಮ್ ಫೆಲೋಗಳ ಇತ್ತೀಚಿನ ಪ್ರಕಟಿತ ಲೇಖನಗಳು

**ಬದನೆಗೆ ಎಷ್ಟು ಬಾರಿ ಸಿಂಪಡಿಸಬೇಕು?**
(ಅಡಿಕೆ ಪತ್ರಿಕೆ, ಏಪ್ರಿಲ್ 2010)
– ಜಿ. ಗಣಪತಿ ಭಟ್ ಹಾರೋಹಳ್ಳಿ

**ಶಾಪಮೋಕ್ಷಕ್ಕೆ ಕಾಯುತ್ತಿರುವ ಗಣೇಶನ ಇಷ್ಟಫಲ**
(ಅಡಿಕೆ ಪತ್ರಿಕೆ, ಜೂನ್ 2010)
– ಜಿ. ಗಣಪತಿ ಭಟ್ ಹಾರೋಹಳ್ಳಿ

**ಬಿಟಿ ಬದನೆ ಪರವಾಗಿರುವವರ ವಾದಗಳೇನು?**
(ರೈತ ಧ್ವನಿ, 29.03. 2010 – 4.04. 2010)
– ಜಿ. ಗಣಪತಿ ಭಟ್ ಹಾರೋಹಳ್ಳಿ

**ಚಾಕಿ ಸೆಂಟರ್‌ಗಳ ಮೊರೆ ಹೋದ ರೇಷ್ಮೆ ಬೆಳೆಗಾರರು**
(ರೈತ ಧ್ವನಿ, ಏಪ್ರಿಲ್ 12-18, 2010)
– ಜಿ. ಗಣಪತಿ ಭಟ್ ಹಾರೋಹಳ್ಳಿ

**ಅಕ್ಕಿಗೂ ಬಂತು ಅಪಪ್ರಚಾರದ ಆತಂಕ !**
(ಪ್ರಜಾವಾಣಿ, 07.04.2010)
–ಜಿ. ಗಣಪತಿ ಭಟ್ ಹಾರೋಹಳ್ಳಿ

**ನಾಳೆ ಹಲಸು ಕಾರ್ಯಾಗಾರ**
(ಪ್ರಜಾವಾಣಿ, 20.05.2010)
– ಜಿ. ಗಣಪತಿ ಭಟ್ ಹಾರೋಹಳ್ಳಿ

**ಹಲಸಿನ ಬೀಜಕ್ಕೂ ಬೇಕಾಗಿದೆ ಸಂಸ್ಕರಣೆಯ ಸತ್ಕಾರ**
(ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ ಹಲಸಿನ ಕಾರ್ಯಾಗಾರದ ಸಂಚಿಕೆ)
– ಜಿ. ಗಣಪತಿ ಭಟ್ ಹಾರೋಹಳ್ಳಿ

**ಕಣ್ಣೀರ್ ತರಿಸದ ಸಿಹಿ ಸಿಹಿ ನೀರುಳ್ಳಿ**
(ವಿಜಯ ಕರ್ನಾಟಕ, 29.03.2010)
– ಪ್ರಕಾಶ್ ಭಟ್ ಕರ್ಕಿ

**ಕುಮಟಾ ನೀರುಳ್ಳಿಗೂ ಕಾಯುದಾಣ**
(ಅಡಿಕೆ ಪತ್ರಿಕೆ, ಮೇ 2010)
– ಪ್ರಕಾಶ್ ಭಟ್ ಕರ್ಕಿ

**ಸಲಾಡ್ ನೀರುಳ್ಳಿ ಗೊತ್ತೇ ನಿಮಗೆ?**
(ಸಂಯುಕ್ತ ಕರ್ನಾಟಕ, 28.04.2010)
– ಪ್ರಕಾಶ್ ಭಟ್ ಕರ್ಕಿ

**ಸಲಾಡ್ ನೀರುಳ್ಳಿ – ಕೆಲವು ಕಿವಿಮಾತುಗಳು**
(ಸಂಯುಕ್ತ ಕರ್ನಾಟಕ, 19.05.2010)
– ಪ್ರಕಾಶ್ ಭಟ್ ಕರ್ಕಿ

**ಕಲಬೆರಕೆಯ ಕರಾಳ ಮುಖ**
(ಸಿರಿ ಸಮೃದ್ಧಿ, ಜೂನ್ 2010)
– ಮಂಜುನಾಥ ಹೆಚ್.

**ಬೀಜ ಬಿತ್ತುವ ಮುನ್ನ 'ಬೀಜ' ಗಣಿತ ಸರಿಯಿರಲಿ**
(ಸಿರಿ ಸಮೃದ್ಧಿ, ಮೇ 2010)
– ಮಂಜುನಾಥ ಹೆಚ್.

**ರಸಗೊಬ್ಬರ ಸಬ್ಸಿಡಿ ನೀತಿ – ಆಹಾರದ ನೀತಿ**
(ಸಮಾಜ ಪರಿವರ್ತನ, ಏಪ್ರಿಲ್ 2010)
– ಮಂಜುನಾಥ ಹೆಚ್.

**ಯಾಮ್ ವೈವಿಧ್ಯ**
(ಅಡಿಕೆ ಪತ್ರಿಕೆ, ಏಪ್ರಿಲ್ 2010)
– ಅನುಸೂಯ ಶರ್ಮ

**ಓಮ್ ಔಷಧದ ಖಜಾನೆ**
(ಸ್ಪೈಸ್ ಇಂಡಿಯಾ, ಫೆಬ್ರವರಿ 2010)
– ಅನುಸೂಯ ಶರ್ಮ

**ಸುವಾಸಿತ ಸಂಬಾರ ಸಬಸಿಗೆ**
(ಸ್ಪೈಸ್ ಇಂಡಿಯಾ, ಮಾರ್ಚ್ 2010)
– ಅನುಸೂಯ ಶರ್ಮ

**ಬೆಂಗಳೂರಿಗೆ ಮಾದರಿ ಈ ಜಲಬಡಾವಣೆ**
(ಕನ್ನಡ ಪ್ರಭ, 28.04.2010)
– ನಾಗರಾಜ ಮತ್ತಿಗಾರ

**ಮನೆಯೇ ಬತ್ತದ ಮ್ಯೂಸಿಯಮ್**
(ಕನ್ನಡ ಪ್ರಭ, 3.06.2010)
– ನಾಗರಾಜ ಮತ್ತಿಗಾರ

**ಕೊಡಗಿಗೆ ಬಂತು ಕಾಳುಮೆಣಸು ಬಿಡಿಸುವ ಯಂತ್ರ**
(ಪ್ರಜಾವಾಣಿ, 25.03.2010)
– ಸಿ.ಎಸ್. ಸುರೇಶ್

**ಉಯ್ಯಾಲೆ ಹಬ್ಬ**
(ಪ್ರಜಾವಾಣಿ, 20.05.2010)
– ಸಿ.ಎಸ್. ಸುರೇಶ್

**ಮುಸುಂಬಿ ಏಕೆ ಬೆಳೆಸಬಾರದು?**
(ಅಡಿಕೆ ಪತ್ರಿಕೆ, ಮೇ 2010)
– ಶಶಿಧರ್ ಸಕ್ಕರೆಮಕ್ಕಿ

**'ಹಳದಿ' ಸಂಕಟಹರಣಕ್ಕೆ ಸತತ ಪ್ರಯೋಗ**
(ಅಡಿಕೆ ಪತ್ರಿಕೆ, ಜೂನ್ 2010)
– ಶಶಿಧರ್ ಸಕ್ಕರೆಮಕ್ಕಿ

**ಗೋವಾದ ಹಲಸು ಪ್ರೇಮಿ ಬಾಬ್ ಕೇಣಿ**
(ಅಡಿಕೆ ಪತ್ರಿಕೆ, ಮೇ 2010)
– ಅಂಕ್ನಳ್ಳಿ ಜಯರಾಮ್

**ಕೃಷಿಯ ಜೊತೆ ಹೋಮ್ ಸ್ಟೇ**
(ಅಡಿಕೆ ಪತ್ರಿಕೆ, ಏಪ್ರಿಲ್ 2010)
– ಮನೋರಮಾ ಜೋಶಿ

**ಇನಕನಹಳ್ಳಿಯ ಮನೆಮನೆಗಳಲ್ಲಿ ಮಳೆನೀರ ಸಿರಿ**
(ಸಿರಿ ಸಮೃದ್ಧಿ, ಜೂನ್ 2010)
– ಶ್ರೀಪ್ರಕಾಶ್

**ಮಹಾನಗರದಲ್ಲಿ ಭತ್ತ ಉತ್ಸವ**
(ಕೃಷಿಕ, ಜನವರಿ, ಫೆಬ್ರವರಿ 2010)
– ಅಚ್ಚನಹಳ್ಳಿ ಸುಚೇತನ

**ಭತ್ತ ಯಾಂತ್ರೀಕರಣದತ್ತ ಬೆಳೆಗಾರರ ಚಿತ್ತ**
(ಕೃಷಿಕ, ಜನವರಿ, ಫೆಬ್ರವರಿ 2010)
– ಜಯರಾಂ ದೇವವೃಂದ

**ರೈತತೀರ್ಪು : ಒಂದು ಅವಲೋಕನ**
(ಕೃಷಿಕ, ಜನವರಿ, ಫೆಬ್ರವರಿ 2010)
– ಕೆ.ಎಸ್. ಪೂರ್ಣಿಮಾ

**ಮಾವಿಗೆ ಪರ್ಯಾಯ ಅಮಟೆ**
(ಪ್ರಜಾವಾಣಿ, 10.06.2010)
– ಸಹನಾ ಕಾಂತಬೈಲು

**ಕನ್ನಡ ಪ್ರಭ 'ಹಿತ್ತಿಲು' ಅಂಕಣದಲ್ಲಿ ಪ್ರಕಟವಾದ ಅನುಸೂಯ ಶರ್ಮ ಅವರ ಲೇಖನಗಳು :**
ಹಕ್ಕಿ ಹಾರುತಿದೆ ನೋಡಿದಿರಾ?/ಏರಿಳಿತದ ಕೆಂಪು ಹಣ್ಣು /ಉತ್ತರ ಧ್ರುವದಿಂ/ಸವಿ ಸಂಗದ ಗೆಡ್ಡೆ ತಮ್ಮಾ!/ಕಮಲಕ್ಕನ ಕೈದೋಟ/ಅಂಗಳಕ್ಕೊಂದು ಅಂದ/ಜೆರೇನಿಯಂ ಎಂಬ ಜೇನು ಹೂವು/ವಸಂತ ಕಾಲ ಬಂದಾಗ/ಹಿತ್ತಲಿಗೆ ಸಂಬಾರ ಗಿಡಗಳು/ದಾಲ್ಚಿನ್ನಿ/ ಸುಗಂಧ ಸ್ವಾರಸ್ಯ/ಏಲಕ್ಕಿಯ ಗಮ್ಮತ್ತು/ನಿರ್ಮಾಲ್ಯದಿಂದ ನಿರ್ಮಲ ಪರಿಸರ/ನಿಸರ್ಗದ ಮೇಲೆ ನೀಗದಿರಲಿ ಕಾಳಜಿ/ಆದಾಯಕ್ಕೊಂದು ಗಿಡ/ರಸಭರಿತ ರಸಾಲು/ಆಹಾರ ಸುರಕ್ಷತೆಗೆ ಅರಬಿ

## ಹೊಸ ಪುಸ್ತಕ

**ಬಿತ್ತಿದ್ದೀರಿ.. ಅದಕ್ಕೆ ಅಳುತ್ತೀರಿ..**
**ಅನು: ಟಿ.ಎಲ್. ಕೃಷ್ಣೇಗೌಡ**



ಬೆಲೆ: ರೂ.100

ಹೆಸರಾಂತ ಅಭಿವೃದ್ಧಿ ಪತ್ರಕರ್ತ ಪಿ. ಸಾಯಿನಾಥ್ ಅವರು ಗ್ರಾಮೀಣ ಭಾರತದ ನಾಡಿ ಹಿಡಿದು ರೈತರ ಬವಣೆಗಳ ಬಗ್ಗೆ ಬರೆದ ಲೇಖನಗಳ ಅನುವಾದ.

ಚಿಂತನ ಪುಸ್ತಕ
#1863, 38ನೇ ಅಡ್ಡರಸ್ತೆ
11ನೇ ಮುಖ್ಯರಸ್ತೆ
4ನೇ ಟಿ. ಬ್ಲಾಕ್, ಜಯನಗರ
ಬೆಂಗಳೂರು – 560 041
chinthana.pusthaka@gmail.com
9448443375

**ನಮ್ಮೂರ ಕೆರೆಗಳು**
**ಲೇ: ಬಸವರಾಜ ಕುಂಚೂರು**



ಬೆಲೆ: ರೂ. 180

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ಕೆರೆಗಳ ಕುರಿತ ಅಧ್ಯಯನದ ವಿವರ, ನಕಾಶೆ, ಛಾಯಾಚಿತ್ರಗಳನ್ನೊಳಗೊಂಡ ದಾಖಲಾತಿ.

ಶ್ರೀ ಚಕ್ರ ಪ್ರಕಾಶನ
ಕುಂಚೂರು
ಹರಪನಹಳ್ಳಿ ತಾಲೂಕು, ದಾವಣಗೆರೆ ಜಿಲ್ಲೆ
08192-261505

**ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ**
ಲೇ: ಮುಝಾಫರ್ ಅಸ್ಸಾದಿ



ಕಳೆದ ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ರೂಪುಗೊಂಡ ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿಗಳನ್ನು ವಿಶ್ಲೇಷಿಸಿ ಬರೆದ ಲೇಖನಗಳ ಸಂಗ್ರಹ.

ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್
#119, 3ನೇ ಅಡ್ಡರಸ್ತೆ, 8ನೇ ಮುಖ್ಯ ರಸ್ತೆ
ಆರ್.ಪಿ.ಸಿ. ಲೇಔಟ್, ವಿಜಯನಗರ
ಬೆಂಗಳೂರು – 560 104


**ಈ ಸಂಚಿಕೆಯ ಪ್ರಾಯೋಜಕರು :**
**ಡಾ. ಎಲ್.ಸಿ.ಸೋನ್ಸ್, ಮೂಡುಬಿದಿರೆ**
ಮುಂದಿನ ಸಂಚಿಕೆಗಳ ಪ್ರಾಯೋಜಕರು: ಎನ್.ಆರ್. ಶೆಟ್ಟಿ, ಬೆಂಗಳೂರು; ಆರ್ಯ-ನಿರ್ಮಲಾ-ನಾಗರಾಜ ಭಟ್, ಧಾರವಾಡ
ಕಾಮ್ ಹಿತೈಷಿಗಳು ಸಂಚಿಕೆಗಳನ್ನು ಪ್ರಾಯೋಜಿಸುವಂತೆ ವಿನಂತಿ. ಒಂದು ಸಂಚಿಕೆಯ ವೆಚ್ಚ 3 ಸಾವಿರ ರೂಪಾಯಿ.

**'ಕಾಮ್ ನ್ಯೂಸ್'** ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆ. ಇದು ಖಾಸಗಿ ಪ್ರಸಾರಕ್ಕಾಗಿ ಮಾತ್ರ..
ಸಂಪಾದಕಿ: ಅನಿತಾ ಪೈಲೂರು, ವಿಳಾಸ: ಕೃಷಿ ಮಾಧ್ಯಮ ಕೇಂದ್ರ, #119, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ – 580 008
◆ Email: agriculturalmedia@gmail.com ◆ Website: www.krushimadhyama.org ◆ ✆ : 0836 – 2444736; 9448410077
ವಿನ್ಯಾಸ ಮತ್ತು ಮುದ್ರಣ: ಆಕೃತಿ ಪ್ರಿಂಟ್ಸ್, ಮಂಗಳೂರು